# KARNATAKA FOREST DEPARTMENT

## ಕೋಡ್ ಸಂಖ್ಯೆ : KA

## ಪ್ರಶ್ನೆ ಪತ್ರಿಕೆ ವಿಷಯ

## ಕನ್ನಡ

**10ನೇ ಡಿಸೆಂಬರ್ 2011ರ ಪೂರ್ವಾಹ್ನ**

**ಗರಿಷ್ಠಾಂಕಗಳು : 100**

**ಸೂಚನೆಗಳು :**

1. ನಿಮ್ಮ ಮೊಬೈಲ್ ಮತ್ತು ಕ್ಯಾಲ್ಕುಲೇಟರ್‌ಗಳನ್ನು ಪರೀಕ್ಷಾ ಕೊಠಡಿಗೆ ತರಬಾರದು.ತಪ್ಪಿದ್ದಲ್ಲಿ ನಿಮ್ಮ ಅಭ್ಯರ್ಥಿತ್ವವನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

2. ಒಟ್ಟು **ಒಂಬತ್ತು** ಮುಖ್ಯ ಪ್ರಶ್ನೆಗಳಿರುತ್ತದೆ.

3. **ಮುಖ್ಯ** ಪ್ರಶ್ನೆಗಳಲ್ಲಿ ಸೂಚಿಸಲಾದಂತೆ ಮಾತ್ರ ಉತ್ತರವನ್ನು ನೀಡುವುದು. ಅನಾವಶ್ಯಕ ಉತ್ತರಗಳಿಗೆ ಅಂಕಗಳನ್ನು ನೀಡುವುದಿಲ್ಲ.

4. ನಿಮ್ಮ ಉತ್ತರಗಳನ್ನು ನಿಮಗೆ ನೀಡಲಾಗಿರುವ **ಉತ್ತರ ಪುಸ್ತಿಕೆಯಲ್ಲಿ ಮಾತ್ರ** ಉತ್ತರಿಸಬೇಕು. ಹೆಚ್ಚುವರಿ ಹಾಳೆಗಳನ್ನು ನೀಡಲಾಗುವುದಿಲ್ಲ.

1. ಈ ಕೆಳಗಿನ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಗುರುತಿಸಿರಿ : **(10×1=10)**

1) ಕನ್ನಡದ ಮೊದಲ ಗ್ರಂಥ

ಅ) ಆದಿಪುರಾಣ ಆ) ಕವಿರಾಜಮಾರ್ಗ

ಇ) ಗದಾಯುದ್ಧ ಈ) ವಿಕ್ರಮಾರ್ಜುನ ವಿಜಯ

2) ಅಕ್ಕಮಹಾದೇವಿಯ ವಚನಗಳ ಅಂಕಿತ

ಅ) ಕೂಡಲಸಂಗಮದೇವ ಆ) ಗುಹೇಶ್ವರ

ಇ) ರಾಮನಾಥ ಈ) ಚೆನ್ನಮಲ್ಲಿಕಾರ್ಜುನ

3) 'ಕರ್ನಾಟ ಭಾರತ ಕಥಾಮಂಜರಿ' ಕಾವ್ಯವನ್ನು ಬರೆದವರು

ಅ) ಕುಮಾರವ್ಯಾಸ ಆ) ಕನಕದಾಸ

ಇ) ರನ್ನ ಈ) ಲಕ್ಷ್ಮೀಶ

4) 'ನಿತ್ಯೋತ್ಸವ' ಕವನದ ಕವಿ

ಅ) ಲಂಕೇಶ ಆ) ದ. ರಾ. ಬೇಂದ್ರೆ

ಇ) ಕೆ. ಎಸ್. ನಿಸ್ಸಾರ್ ಅಹಮದ್ ಈ) ಪು.ತಿ.ನ.

5) ಚಂದ್ರಶೇಖರ ಕಂಬಾರ ಅವರ ಮಹಾಕಾವ್ಯ

ಅ) ಚಕೋರಿ ಆ) ಸಿಂಗಾರವ್ವ ಮತ್ತು ಅರಮನೆ

ಇ) ಹೇಳ್ತೇನೆ ಕೇಳ ಈ) ಕಾಡುಕುದುರೆ

6) ಜಿ. ಎಸ್. ಶಿವರುದ್ರಪ್ಪ ಇವರು ಕನ್ನಡದ

ಅ) ವರಕವಿ ಆ) ಶಿವಕವಿ

ಇ) ರಾಷ್ಟ್ರಕವಿ ಈ) ನಾಡಕವಿ

7) 78ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

ಅ) ಸಿ. ಪಿ. ಕೆ. ಆ) ಚಿದಾನಂದಮೂರ್ತಿ

ಇ) ಅ. ರಾ. ಮಿತ್ರ ಈ) ಎಮ್. ಎಮ್. ಕಲಬುರ್ಗಿ

8) ಕನ್ನಡಕ್ಕೆ ದೊರೆತ ಜ್ಞಾನಪೀಠ ಪ್ರಶಸ್ತಿಗಳ ಸಂಖ್ಯೆ

ಅ) ಐದು
ಆ) ಏಳು
ಇ) ಆರು
ಈ) ಎಂಟು

9) 'ತ್ರಿವೇಣಿ' ಎಂಬುವವರು ಕನ್ನಡದ

ಅ) ಕ್ರೀಡಾಪಟು
ಆ) ಲೇಖಕಿ
ಇ) ಗಾಯಕಿ
ಈ) ನಟಿ

10) ಮೈಸೂರು ರಾಜ್ಯಕ್ಕೆ 'ಕರ್ನಾಟಕ'ವೆಂದು ನಾಮಕರಣ ಮಾಡಿದವರು

ಅ) ಕೆಂಗಲ್ ಹನುಮಂತಯ್ಯ
ಆ) ಎಸ್. ಎಮ್. ಕೃಷ್ಣ
ಇ) ರಾಮಕೃಷ್ಣ ಹೆಗಡೆ
ಈ) ದೇವರಾಜ ಅರಸು

2. ಅ) ಬಿಟ್ಟ ಸ್ಥಳ ತುಂಬಿರಿ : **5**

1) 'ರಾಮನಿಗೆ' ಈ ಪದದಲ್ಲಿರುವ ವಿಭಕ್ತಿ ಪ್ರತ್ಯಯ ____________

2) 'ವಾಚನಾಲಯ' ಇದು ____________ ಸಂಧಿಗೆ ಉದಾಹರಣೆ.

3) 'ಹಳೆಗನ್ನಡ' ಇದು ____________ ಸಮಾಸ.

4) 'ಆನೆ' ಇದು ____________ ಲಿಂಗ.

5) 'ಮೆಲ್ಲಮೆಲ್ಲನೆ' ಇದು ____________ ಪದ.

ಆ) ಕೆಳಗಿನ ಪದಗಳ ಅರ್ಥ ಬರೆಯಿರಿ : **2**

1) ತನು

2) ವದನ

3) ಉದಕ

4) ಬಾರಿ

ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದ ಬರೆಯಿರಿ : **2**

1) ಆಗಮನ ×

2) ಕೋಪ ×

3) ಆಚಾರ ×

4) ಜಡ ×

ಈ) ಈ ಕೆಳಗಿನ ಪದಗಳಿಗೆ ತತ್ಸಮ ತದ್ಭವ ಬರೆಯಿರಿ : **2**

1) ಅಕ್ಷರ –

2) ಕಾವ್ಯ –

3) ಆಶ್ಚರ್ಯ –

4) ಹಂಸ –

ಉ) ಬಿಡಿಸಿ ಬರೆಯಿರಿ : **2**

1) ಜೀವನಾವಶ್ಯಕ

2) ಲೋಕೈಕ

3) ತಲೆಗೂದಲು

4) ಮುಂಬಾಗಿಲು

ಊ) ಸೇರಿಸಿ ಬರೆಯಿರಿ : **2**

1) ಮರದ + ಕಾಲು =

2) ಹುಬ್ಬಿನ + ಕುಡಿ =

3) ಜಯ + ಅಪಜಯ =

4) ವನ + ಔಷಧ =

3. ಈ ಕೆಳಗಿನ ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯಿರಿ (ಬೇಕಾದ **ಎರಡು**) : **(2×5=10)**

1) ಅಳದಿದ್ದರೆ ಅಮ್ಮನೂ ಹಾಲು ಕುಡಿಸುವುದಿಲ್ಲ.

2) ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದೀತೆ ?

3) ದುಡಿಯುವವನಿಗೆ ದುಃಖವಿಲ್ಲ , ಸೋಮಾರಿಗೆ ಸುಖವಿಲ್ಲ.

4) ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ.

4. ಆವರಣದಲ್ಲಿ ಕೊಟ್ಟಿರುವ ಸೂಚನೆಗೆ ಅನುಗುಣವಾಗಿ ಕೆಳಗಿನ ವಾಕ್ಯಗಳನ್ನು ಬದಲಾಯಿಸಿ : **(10×1=10)**

1) ವೈದ್ಯರು ಬರೆದಿರುವುದನ್ನೇ ಅಂಗಡಿಯವನು ಕೊಟ್ಟಿದ್ದಾನೆ. (ಭವಿಷ್ಯತ್ ಕಾಲಕ್ಕೆ ಬದಲಾಯಿಸಿ)

2) ಬೆಂಗಳೂರು ಕರ್ನಾಟಕ ರಾಜ್ಯದ ರಾಜಧಾನಿ. (ಪ್ರಶ್ನಾರ್ಥಕ ವಾಕ್ಯವಾಗಿ ಪರಿವರ್ತಿಸಿ)

3) ಅದೇಕೆ ಹೀಗೆ ಮಾಡಿದೆ (ಸೂಕ್ತ ಲೇಖನ ಚಿಹ್ನೆ ಹಾಕಿರಿ)

4) ರಾಮ ಲಕ್ಷ್ಮಣರು ಕಾಡಿಗೆ ಹೋದನು. (ವಾಕ್ಯ ದೋಷವನ್ನು ಸರಿಪಡಿಸಿ)

5) ಆತ್ಮಾಭಿಮಾನವನ್ನು ಅಹಂಕಾರವೆಂದು ಹೇಳಲಾಗುವುದಿಲ್ಲ. (ಕ್ರಿಯಾಪದದ ಮೂಲರೂಪ (ಧಾತು)ವನ್ನು ಗುರುತಿಸಿ)

6) ಶಿಕ್ಷಣವೆಂಬುವುದು ವ್ಯಕ್ತಿಯ ಸರ್ವ ತೊಮುಕ ಅಭಿವೃದ್ದಿ. (ಪದ ದೋಷಗಳನ್ನು ಸರಿಪಡಿಸಿ)

7) ಅತಿ ಹೀನಾಯವಾದ ಒಂದು ಕುಡಿತವು ಪಿಡುಗುಗಳಲ್ಲಿ ಸಾಮಾಜಿಕ (ಅರ್ಥಪೂರ್ಣವಾಕ್ಯವನ್ನಾಗಿ ಪರಿವರ್ತಿಸಿ)

8) ಪ್ರೀತಿ ವಿಶ್ವಾಸ ಬೆಳೆಸಿಕೊಂಡರೆ ಸುಖ ಸಿಗುತ್ತದೆ. (ನಿಷೇಧಾರ್ಥಕ ವಾಕ್ಯವನ್ನಾಗಿ ಬದಲಾಯಿಸಿ)

9) ಆಗುಂಬೆಯ ಸೂರ್ಯಾಸ್ತ ಅದ್ವಿತೀಯವಾದದು. (ವಿಶೇಷಣವನ್ನು ಗುರುತಿಸಿ)

10) ನಾನು ಪರೀಕ್ಷೆಗೆ ಕುಳಿತಿದ್ದೇನೆ. (ವಚನ ಬದಲಾಯಿಸಿರಿ)

5. ಈ ಕೆಳಗಿನ ನುಡಿಗಟ್ಟುಗಳನ್ನು ಸ್ವಂತವಾಕ್ಯದಲ್ಲಿ ಪ್ರಯೋಗಿಸಿ : **5**

1) ಅರ್ಧಚಂದ್ರ ಪ್ರಯೋಗ

2) ಅಳಿಲು ಸೇವೆ

3) ಎತ್ತಿದ ಕೈ

4) ಅಡ್ಡದಾರಿ ಹಿಡಿ

5) ಭೂಮಿಗೆ ಭಾರ

6. ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚಾಗಿರುವುದರ ಕುರಿತು ಪ್ರಜಾವಾಣಿ ಪತ್ರಿಕೆಯ ವಾಚಕರ ವಾಣಿ ವಿಭಾಗಕ್ಕೆ ಒಂದು ಪತ್ರ ಬರೆಯಿರಿ. **(15×1=15)**

**ಅಥವಾ**

ನಿಮ್ಮ ಬಡಾವಣೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು ವ್ಯವಸ್ಥೆಗಾಗಿ ವಿನಂತಿಸಿ ಜಲಮಂಡಳಿಯ ಮುಖ್ಯಸ್ಥರಿಗೆ ಒಂದು ಪತ್ರ ಬರೆಯಿರಿ.

7. ಈ ಕೆಳಗಿನ **ಎರಡು** ಪರಿಚ್ಛೇದವನ್ನು **ಕನ್ನಡಕ್ಕೆ** ಅನುವಾದಿಸಿ : **(7+8=15)**

To make the body strong we must use the part of our body. The parts that are most used become the stronger. Those we use least will be the weakest. The boy who works and plays in the open air grows strong and healthy. The boy who sits indoors and does not take exercise grows weak.

**ಮತ್ತು**

I had never been in a large city. This rather added to my misery. When I reached Mysore, I was completely out of money. I had not a single acquaintance in that place. I was unused to city ways. I did not know where to go. I asked several places for lodging. They all wanted money and that was what I did not have. Knowing nothing better, I walked the streets.

8. ಈ ಕೆಳಗಿನ ಗದ್ಯಭಾಗವನ್ನು ಓದಿಕೊಂಡು ಅದರ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ : **(5×1=5)**

ಮನುಷ್ಯ ಮೂಲತಃ ಸಮಾಜಜೀವಿ. ಸಮಾಜವನ್ನು ಬಿಟ್ಟು ಮನುಷ್ಯನಿಗೆ ಅಸ್ತಿತ್ವವಿಲ್ಲ. ಜನಸಮುದಾಯದ ನಡುವೆಯೇ ಆತ ಬೆಳೆಯುತ್ತಾನೆ. ಆತನ ಒಳಿತು–ಕೆಡಕುಗಳಿಗೆ, ಸುಖ–ದುಃಖಗಳಿಗೆ ಅಂದಿನ ಸಮಾಜ ವ್ಯವಸ್ಥೆಯಲ್ಲಿಯೇ ಕಾರಣಗಳು ಸಿಗುತ್ತವೆ. ಸಮಾಜವನ್ನು ಬಿಟ್ಟು ಸಂಸಾರವನ್ನು ತೊರೆದು ಸನ್ಯಾಸಿಯಾದವನೂ ತನಗರಿವಿಲ್ಲದಂತೆಯೇ ಆ ಸಮಾಜ ವ್ಯವಸ್ಥೆಯ ಬಗೆಗೆ ಏನಾದರೂ ಮಾತನಾಡುತ್ತಲೇ ಇರುತ್ತಾನೆ. ಇಲ್ಲವೆ ಆ ಸಮಾಜದಲ್ಲಿದ್ದಾಗಿನ ನೆನಪುಗಳನ್ನು ಮರುಕಳಿಸುತ್ತಿರುತ್ತಾನೆ. ಹೀಗೆ ಸಮಾಜವನ್ನು ಬಿಟ್ಟು ಸಮಾಜದ ಬದುಕನ್ನೂ ಬಿಟ್ಟು ಬದುಕಲು ಅಸಾಧ್ಯ. ಆದರೂ ಸಮುದಾಯದ ನಡುವಿದ್ದರೂ

ಸಮುದಾಯವನ್ನು ಎಲ್ಲರೂ ಅರ್ಥೈಸಿಕೊಂಡಿರುವುದಿಲ್ಲ. ಜನ ಸಮುದಾಯದ ಮೂಲಕ, ಆ ಸಮಾಜದ ಸಂಸ್ಕೃತಿಯ ಮೂಲಕ, ಅಲ್ಲಿಯ ಐತಿಹಾಸಿಕ ದಾಖಲೆಗಳ ಮೂಲಕ, ರಾಜಕೀಯ ಸ್ಥಿತ್ಯಂತರಗಳ ಮೂಲಕ, ಸಾಹಿತ್ಯದ ಆಶಯಗಳ ಮೂಲಕ ಸಮಾಜದ ಬಗೆಗೆ ತಿಳಿದುಕೊಂಡು ಸಮಾಜದ ಬೆಳವಣಿಗೆಗೆ ಪ್ರಯತ್ನಿಸುವುದು ಆಲೋಚಿಸುವುದು ಸಾಮಾಜಿಕ ಪ್ರಜ್ಞೆ ಎಂದೆನಿಸುತ್ತದೆ. ಇಂಥ ಸಾಮಾಜಿಕ ಪ್ರಜ್ಞೆ ಉಳ್ಳವರು ಮೌಢ್ಯತೆಯನ್ನು ತಿರಸ್ಕರಿಸಿ ಸಮಾನತೆ –ಮಾನವೀಯತೆಯನ್ನು ಸ್ವಾಗತಿಸಿ ಸಾಮಾಜಿಕ ಸ್ಥಿತಿಯನ್ನು ಆರೋಗ್ಯಕರವಾಗಿಡುವುದು ಅತ್ಯಗತ್ಯ.

**ಪ್ರಶ್ನೆಗಳು :**

1) ಸಮಾಜವನ್ನು ಬಿಟ್ಟು ಮನುಷ್ಯನಿಗೆ ಏಕೆ ಅಸ್ತಿತ್ವವಿಲ್ಲ ?

2) ಸಾಮಾಜಿಕ ಪ್ರಜ್ಞೆ ಎಂದರೇನು ?

3) ಸಾಮಾಜಿಕ ಪ್ರಜ್ಞೆ ಉಳ್ಳವರ ಕರ್ತವ್ಯವೇನು ?

4) ಸನ್ಯಾಸಿ ಸಾಮಾಜಿಕ ವ್ಯವಸ್ಥೆಯನ್ನು ಬಿಟ್ಟು ಬದುಕಲು ಏಕೆ ಸಾಧ್ಯವಾಗುವುದಿಲ್ಲ ?

5) ಈ ಮೇಲಿನ ಗದ್ಯಭಾಗಕ್ಕೆ ಸೂಕ್ತ ತಲೆಬರಹವನ್ನು ನೀಡಿ.

9. ಯಾವುದಾದರೂ **ಒಂದು** ವಿಷಯದ ಕುರಿತು **250-300** ಪದಗಳಿಗೆ ಮೀರದಂತೆ ಲೇಖನ ಬರೆಯಿರಿ : **(15×1=15)**

1) ಭೂ ತಾಪಮಾನ ಏರಿಕೆ – ಕಾರಣಗಳು ಮತ್ತು ಪರಿಹಾರೋಪಾಯಗಳು

2) ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಯುವಕರ ಪಾತ್ರ

3) ರಾಷ್ಟ್ರೀಯ ಭಾವೈಕ್ಯತೆ.

ಚಿತ್ತು ಬರಹಕ್ಕಾಗಿ ಸ್ಥಳ